ದಿನಾಂಕ 25-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲು :** ಆರೋಪಿ ಪರ ಶ್ರೀ ಎಸ್.ಒ.ಎನ್. ವಕೀಲರಿಂದಃ

1. ನೀವು ನಿಮ್ಮ ಪಿರ್ಯಾದಿಯಲ್ಲಿ ಹೇಳಿರುವಂತೆ ಆರೋಪಿಗೆ ದಿನಾಂಕ 10-06-2013 ಕ್ಕೆ ಹಣವನ್ನು ಸಾಲವಾಗಿ ನೀಡಿದಂತೆ. ಆ ಹಣವನ್ನು ಮರುಪಾವತಿ ಮಡಾಡಿಸಿಕೊಳ್ಳಲು ಕೇವಲ 3 ವರ್ಷಗಳ ಕಾಲ ಅವಧಿ ಇರುತ್ತದೆ ಎಂದರೆ ನಾನು ಹಣವನ್ನು ಕೆಲವೊಮ್ಮೆ ನಗದಿನ ಮುಖಾಂತರ ಚೆಕ್ ಮುಖಾಂತರ ಕೊಟ್ಟಿರುತ್ತೇನೆ. ಈ ವ್ಯವಹಾರದ ನಂತರವು ಆರೋಪಿಯು ನನ್ನ ಬಳಿಯಲ್ಲಿ ಸಾಲವಾಗಿ ಪಡೆದುಕೊಳ್ಳುತ್ತಾ ಬಂದಿರುತ್ತಾನೆ. ನನಗೆ 3 ವರ್ಷಗಳ ಅವಧಿಯಲ್ಲಿ ಆರೋಪಿ ಕಡೆಯಿಂದ ಹಣವನ್ನು ಮರುಪಾವತಿಸಿಕೊಳ್ಳಬೇಕು ಎಂಬ ಬಗ್ಗೆ ನನಗೆ ಅಷ್ಟೊಂದು ಮಾಹಿತಿ ಇಲ್ಲ. ನಾನು ಈ ಖಾಸಗಿ ದೂರನ್ನು ಸಲ್ಲಿಸಿದ ನಂತರ ಆರೋಪಿಗೆ ಹಣವನ್ನು ಸಾಲವಾಗಿ ಕೊಟ್ಟಿರುವುದಿಲ್ಲ. ಕೊನೆಯದಾಗಿ ಈ ಖಾಸಗಿ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಯಾವ ದಿನಾಂಕದಂದು ಹಣವನ್ನು ಕೊಟ್ಟಿರುತ್ತೀರಿ ಎಂದರೆ ಮೇ 2021 ನೇ ಸಾಲಿನಲ್ಲಿ ಕೊಟ್ಟಿರುತ್ತೇನೆ. ದಿನಾಂಕ ಈನ ನನಗೆ ನೆನಪಿಲ್ಲ. ಆ ಸಮಯದಲ್ಲಿ ಆರೋಪಿಗೆ ರೂ.20 ಸಾವಿರ ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿಗೆ ಪಿರ್ಯಾದಿಯಲ್ಲಿ ರೂ. 15 ಲಕ್ಷ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳಿರುತ್ತೀರಿ ಎಂದರೆ ನಾನು ಕೊಟ್ಟ ರೂ.20 ಸಾವಿರ ಹಣ ಈ 15 ಲಕ್ಷ ರೂಪಾಯಿ ಹಣದಲ್ಲಿ ಸೇರಿಕೊಂಡಿರುತ್ತದೆ. ಕೊನೆಯದಾಗಿ ರೂ.20 ಸಾವಿರ ಹಣವನ್ನು ಕೊಟ್ಟ ನಂತರ 7-8 ತಿಂಗಳಿನಲ್ಲಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ಆರೋಪಿಯು ಭರವಸೆ ಕೊಟ್ಟಿರುತ್ತೇನೆ. ಸದ್ರಿ 15 ಲಕ್ಷ ಹಣವನ್ನು ಎಷ್ಟು ಕಂತಿನಲ್ಲಿ ಆರೋಪಿಗೆ ಕೊಟ್ಟಿರುತ್ತೀರಿ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ಅದರ ಬಗ್ಗೆ ನೆನಪಿನ ಸಲುವಾಗಿ ಆ 15 ಲಕ್ಷ ಹಣದ ಬಗ್ಗೆ ನಾನು ಬರೆದು ಇಟ್ಟಿರುತ್ತೇನೆ. ಸದ್ರಿ ಹಣದ ಬಗ್ಗೆ ಆರೋಪಿಗೆ ಹಣವನ್ನು ಕೊಟ್ಟ ಬಗ್ಗೆ ಬರೆದಿರುತ್ತೇನೆ. ಆ ಹಣವನ್ನು ಕೊಟ್ಟಿದನ್ನು ಬರೆದಿಟ್ಟದರ ಮುಂದೆ ಆರೋಪಿಯ ಸಹಿಯನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಇಲ್ಲ. ನನ್ನ ಮತ್ತು ಆರೋಪಿಯ ಮದ್ಯೆ ಒಳ್ಳೆಯ

ಸಂಬಂಧವಿತ್ತು ಹಾಗಾಗಿ ಆರೋಪಿಯ ಸಹಿಯನ್ನು ಪಡೆದುಕೊಂಡಿರಲಿಲ್ಲ. ಸದ್ರಿ 15 ಲಕ್ಷ ಹಣವನ್ನು ಆರೋಪಿಗೆ ಎಷ್ಟು ಅವಧಿಗೆ ಸಾಲದ ರೂಪದಲ್ಲಿ ಕೊಟ್ಟಿರುತ್ತೀರಿ ಎಂದರೆ 8–9 ವರ್ಷಕ್ಕೆ ಬರೆದುಕೊಟ್ಟಿರುತ್ತೇನೆ. ಆ 8–9 ವರ್ಷಗಳ ಅವಧಿಯಲ್ಲಿ ಆರೋಪಿಯ ಕೆಲವೊಂದು ಸಾರಿ ಸಣ್ಣ ಸಣ್ಣ ಹಣವನ್ನು ತುಂಬಿರುತ್ತಾನೆ. ಅದು 7–8 ಸಲ ಆಗಿರಬಹುದು. ನೀವು ಪಿರ್ಯಾದಿಯಲ್ಲಿ ನೀವು ಕೊಟ್ಟ ಹಣವನ್ನು ಮಾತ್ರ ನಮೂದು ಮಾಡಿರುತ್ತೀರಿ ಅದನ್ನು ಹೊರುಪಡಿಸಿ ಆರೋಪಿಯಿಂದ ಬಂದ ಹಣವನ್ನು ನಮೂದು ಮಾಡಿಲ್ಲ ಎಂದರೆ ಆ ಹಣಕ್ಕೂ ಈ ಪ್ರಕರಣಕ್ಕೂ ಸಂಬಂಧವಿಲ್ಲ. ಆರೋಪಿಯು ನನಗೆ ಬಹುತೇಕ ಹಣವನ್ನು ಕ್ಯಾಶ್ ಮುಖಾಂತರ ಕೊಟ್ಟಿರುತ್ತಾರೆ. ಆ ರೀತಿ 2 ಲಕ್ಷದವರೆಗೂ ಹಣವನ್ನು ಕೊಟ್ಟಿರುತ್ತಾರೆ. ನಿಮ್ಮಿಂದ ಪಡೆದುಕೊಂಡ ಅಷ್ಟೊಂದು ಹಣವನ್ನು ಆತ ಏನು ಮಾಡುತ್ತಿದ ಮತ್ತು ಯಾವುದರಲ್ಲಿ ತೊಡಗಿಸುತ್ತಿದ್ದ ಎಂದು ನೀವು ವಿಚಾರಣೆ ಮಾಡಿರುತ್ತೀರಾ ಎಂದರೆ ಮೊಬೈಲ್ ಡೀಲರ್ ಶಾಪ್ ಗಳಿದ್ದು, ರಿಲಾಯನ್ಸ್ ಡೀಲರ್ ಶಿಪ್ ನಲ್ಲಿ ಕಮ್ಯೂನಿಕೇಷನ್ ತೆಗೆದುಕೊಂಡು ಅದನ್ನು ನನ್ನ ಬಳಿಯಲ್ಲಿ ಡೀಲರ್ ಶಿಪ್ ಗಾಗಿ ಹಣವನ್ನು ಹೂಡುತ್ತಿದ್ದೇನೆ ಮತ್ತು ಭೂ ಖರೀದಿಗಾಗಿ ಹಣವನ್ನು ಹೂಡುತ್ತಿದ್ದೇನೆ ಎಂದು ನನ್ನ ಬಳಿ ಹೇಳುತ್ತಿದ್ದರು. ಈ ವಿಷಯವನ್ನು ನನ್ನ ಪಿರ್ಯಾದಿಯಲ್ಲಾಗಲಿ ಅಥವಾ ನೋಟಿಸಿನಲ್ಲಾಗಲಿ ಹೇಳಿಲ್ಲ. ರಿಲಾಯನ್ಸ್ ಡೀಲರ್ ಶಿಪ್ ನಲ್ಲಿ ಕಮ್ಯೂನಿಕೇಷನ್ ತೆಗೆದುಕೊಂಡು ಅದನ್ನು ನನ್ನ ಬಳಿಯಲ್ಲಿ ಡೀಲರ್ ಶಿಪ್ ಗಾಗಿ ಹಣವನ್ನು ಹೂಡುತ್ತಿದ್ದೇನೆ ಮತ್ತು ಭೂ ಖರೀದಿಗಾಗಿ ಹಣವನ್ನು ಹೂಡುತ್ತಿದ್ದೇನೆ ಎಂದು ನಿಮ್ಮ ಬಳಿಯಲ್ಲಿ ಹೇಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದಾನುವೇಳೆ ಆ ರೀತಿಯಾಗಿ ಆರೋಪಿಯು ನೀವು ಕೊಟ್ಟ ಹಣವನ್ನು ಹೂಡಿಕೆ ಮಾಡಿದರೆ ನಿಮ್ಮ ನೋಟಿಸಿನಲ್ಲಿ ಮತ್ತು ಪಿರ್ಯಾದಿಯಲ್ಲಿ ಹೇಳುತ್ತಿದ್ದೀರಿ ಎಂದರೆ ಆ ಸಮಯದಲ್ಲಿ ನಾನು ಅದನೆಲ್ಲ ವಕೀಲರ ಮೂಲಕ ಹೇಳಿ ಬರೆಸಬೇಕು ಎಂಬ ಮಾಹಿತಿ ನನಗೆ ಇರಲಿಲ್ಲ. ನಿಮ್ಮ ಮತ್ತು ಆರೋಪಿಯ ಮದ್ಯೆಯಾದ ಹಣದ ವ್ಯವಹಾರ ಒಟ್ಟು ಎಷ್ಟು ಬ್ಯಾಂಕಿನಿಂದ ಆಗಿರುತ್ತದೆ ಎಂದರೆ 2–3 ಬ್ಯಾಂಕ್ ಆಗಿರುತ್ತದೆ. ಆ ವ್ಯವಹಾರದ ಬಗ್ಗೆ ನನ್ನ ಪಾಸ್ ಪುಸ್ತಕದಲ್ಲಿ ನಮಾದಾಗಿರುತ್ತದೆ. ನೀವು ಆ ಬ್ಯಾಂಕಿಗೆ ಹೋಗಿ ಆ ಹಣ ವ್ಯವಹಾರ ಆಗಿದರ ಎಕ್ಸ್ ಟ್ರಾಕ್ಟ ಕೊಡಿ ಎಂದರೆ ಬ್ಯಾಂಕ್ ನವರು ಕೊಡುತ್ತಾರೆ ಎಂದರೆ ಸರಿ. ಸಾಕ್ಷಿಯು ಪುನಹ ಮುಂದುವರಿದು ಕಾರ್ಪೊರೇಷನ್ ಬ್ಯಾಂಕಿನಿಂದ ಯಾನಿಯನ್ ಬ್ಯಾಂಕಿಗೆ ವಿಲೀನವಾಗಿರುತ್ತದೆ. ಈ

ರೀತಿಯಾಗಿ ವಿಲೀನವಾಗಿದರಿಂದ ಯೂನಿಯನ್ ಬ್ಯಾಂಕಿನಲ್ಲಿ ಹೋಗಿ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಈ ವ್ಯವಹಾರ ಆಗಿದರ ಬಗ್ಗೆ ಸ್ಟೆಟ್ ಮೆಂಟ್ ಕೊಡಿ ಎಂದರೆ ಕೊಡುತ್ತಿಲ್ಲ. ಆ ರೀತಿ ಸ್ಟೇಟ್ ಮೆಂಟ್ ಕೊಡಬೇಕು ಎಂದು ಬ್ಯಾಂಕಿಗೆ ಹೋಗಿ ಅರ್ಜಿಯನ್ನು ನಾನು ಕೊಟ್ಟಿರುತ್ತೇನೆ. ಅದರ ಬಗ್ಗೆ ಹಿಂಬರಹವನ್ನು ನಾನು ಪಡೆದುಕೊಂಡಿಲ್ಲ. ಸದ್ರಿ ಅರ್ಜಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ಮುಂದಿನ ವಾಯಿದೆಗೆ ಹಾಜರುಪಡಿಸುತ್ತೇನೆ.

2. ನನಗೆ ಬಿ.ಪಿ.ಎಲ್. ಕಾರ್ಡ್ ಇರುವುದಿಲ್ಲ. ನಾನು ಆದಾಯ ತೆರಿಗೆ ರಿಟರ್ನ್‌ಅನ್ನು ಸಲ್ಲಿಸುತ್ತಿದ್ದೇನೆ. ನಾನು ಉದ್ಯೋಗಸ್ಥನಾಗಿರುವುದರಿಂದ ಫಾರಂ ನಂ.16 ಅನ್ನು ಸಲ್ಲಿಸುತ್ತಿದ್ದೇನೆ. ನನ್ನ ವಾರ್ಷಿಕ ಆದಾಯ ರೂ.13 ಲಕ್ಷ ಇರುತ್ತದೆ. ನನ್ನ ಆದಾಯವು ಯಾವ ವರ್ಷದಿಂದ ವಾರ್ಷಿಕವಾಗಿ ರೂ.5 ಲಕ್ಷ ಕ್ಕಿಂತ ಜಾಸ್ತಿಯಾಗಿರುತ್ತದೆ ಎಂದರೆ 9-10 ವರ್ಷಗಳ ಹಿಂದಿನಿಂದ ಆದಾಯವು ವಾರ್ಷಿಕವಾಗಿ ರೂ.5 ಲಕ್ಷ ಕ್ಕಿಂತಲೂ ಜಾಸ್ತಿಯಾಗಿರುತ್ತದೆ. ಈಗ ನಾನು 9-10 ವರ್ಷಗಳ ಹಿಂದಿನಿಂದ ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನೌಕರಸ್ಥನಾಗಿರುವುದರಿಂದ ನನ್ನ ಆದಾಯ ತೆರಿಗೆಯು ನನ್ನ ಸಂಬಳದಲ್ಲಿಯೇ ಕಟ್ ಆಗುತ್ತದೆ. ಆ ಕಟ್ಟಿದ್ದಕ್ಕೆ ನೀವು ಆದಾಯ ತೆರಿಗೆ ಇಲಾಖೆಯಿಂದ ಯಾವಾಗಲಾದರೂ ಹಣವನುನ ಮರುಪಾವತಿಗಾಗಿ ಕೇಳಿರುತ್ತೀರಾ ಎಂದರೆ ಕೆಲವೊಂದು ಸಾರಿ ಹೆಚ್ಚಿಗೆ ಆದಾಯ ತೆರಿಗೆಯನ್ನು ಕಟ್ಟಿದ ಸಮಯದಲ್ಲಿ ನಾನು ಆ ಹಣವನ್ನು ಮರುಪಾವತಿಗಾಗಿ ಕೇಳಿರುತ್ತೇನೆ. ಸದ್ರಿ ಸಾಲವನ್ನು ಆರೋಪಿಗೆ ಕೊಟ್ಟಿಧರ ಬಗ್ಗೆ ನಿಮ್ಮ ಆದಾಯ ತೆರಿಗೆ ಪಾವತಿಯಲ್ಲಿ ಕಾಣಿಸುತ್ತೀರಾ ಎಂದರೆ ನಾನು ಸಂಬಳ ಪಡೆದುಕೊಳ್ಳುತ್ತಿರುವುದರಿಂದ ಅವುಗಳನ್ನು ಆದಾಯ ತೆರಿಗೆ ಪಾವತಿಯಲ್ಲಿ ಕಾಣಿಸಲು ಬರುವುದಿಲ್ಲ. ನೀವು ಆರೋಪಿಗೆ ಯಾವುದೇ ಹಣವನ್ನು ಸಾಲವಾಗಿ ಕೊಡದೆ ಇರುವುದರಿಂದ ಆ ಹಣವನ್ನು ಆದಾಯ ತೆರಿಗೆ ಪಾವತಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ನಾನು ನೌರಸ್ಥನಾಗಿರುವುದರಿಂದ ಸದ್ರಿ ಹಣವನ್ನು ಆದಾಯ ತೆರಿಗೆ ಪಾವತಿಯಲ್ಲಿ ಕಾಣಿಸಿರುವುದಿಲ್ಲ. ನಾನು ಆರೋಪಿಗೆ ಗೆಳೆತನದ ನಾತೆಯಿಂದ ನಂಬಿಕೆಯ ಆಧಾರದಲ್ಲಿ ಕೊಟ್ಟಿರುತ್ತೇನೆ. ರೂ. 20 ಸಾವಿರಕ್ಕಿಂತ ಅಧಿಕವಾದ ಹಣವನ್ನು ಚೆಕ್ಕಿನ ಮುಖಾಂತರ ಕೊಡಬೇಕು ನಗದಿನ ರೂಪದಲ್ಲಿ ಸಾಲಕ್ಕೆ ಕೊಡಲು ನಿರ್ಬಂಧ ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಅಷ್ಟೊಂದು ಮಾಹಿತಿ ಇಲ್ಲ.

ನಿಮ್ಮ ನೋಟಿಸ್ ಮತ್ತು ಪಿರ್ಯಾದಿಯಲ್ಲಿ ಹೇಳಿದಂತಹ ವ್ಯವಹಾರಣೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನೀವು ಈಕ್ವಿಟಿ ಶೇರ್ ವ್ಯವಹಾರವನ್ನು ಮಾಡುತ್ತಿದ್ದು ಆರೋಪಿಯು ನಿಮಗೆ ಕನ್ಸಲ್ ಟೆಂಟ್ ಆಗಿದ್ದರು ಎಂದರೆ ಆ ರೀತಿ ಇಲ್ಲ. ನೀವು ಮತ್ತು ಆರೋಪಿಯು ಈಕ್ವಿಟಿ ಶೇರ್ ನಲ್ಲಿ ಪಾಲುದಾರಿಕೆ ಮಾಡಿಕೊಂಡು ಬಂದ ಲಾಭವನ್ನು ಇಬ್ಬರು ಪಾಲುದಾರಿಕೆಯಲ್ಲಿ ಹಂಚಿಕೊಳ್ಳಬೇಕು ಎಂದು ಒಪ್ಪಂದ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅವರು ನಿಖರವಾಗಿ ಇಂತಹ ವ್ಯವಹಾರವನ್ನು ಮಾಡುತ್ತಾರೆ ಎಂದು ಇರಲ್ಲಿಲ್ಲ. ಅವರು ಈ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು. ಅವರು ಈಕ್ವಿಟಿ ಶೇರ್ ವ್ಯವಹಾರವನ್ನು ಮಾಡುತ್ತಿದ್ದರು ಎಂದು ನಿಮಗೆ ಗೊತ್ತಿತ್ತಾ ಎಂದರೆ ಅವರು ಸರಕು ಮತ್ತು ಚಿನ್ನದಲ್ಲಿ ಹಣವನ್ನು ಹೂಡಿಕೆ ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದರು. ಅದನ್ನು ನಿವಿಬ್ಬರು ಒಟ್ಟಾಗಿ ಮಾಡುತ್ತಿದ್ದು ಹಣವನ್ನು ನೀವು ಹೂಡಿಕೆ ಮಾಡಬೇಕಾಗಿತ್ತು ಸಲಹೆ ಅವರು ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ಸದ್ರಿ ಈಕ್ವಿಟಿ ಶೇರ್ ಹೂಡಿಕೆಗೆ ನೀವು ನಿಗದಿತವಾದ ಲಾಗಿನ್ ಐ.ಡಿ. ಮತ್ತು ಪಾಸ್ ವರ್ಡ ನ್ನು ಹೊಂದಿದ್ದು ಅದನ್ನು ಆರೋಪಿಗೆ ನೀವು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯು ನಿಮಗೆ ಸಂಬಂಧಿಸಿದಂತಹ ಲಾಗಿನ್ ಐ.ಡಿ. ಮತ್ತು ಪಾಸ್ ವರ್ಡ ಅನ್ನು ಬಳಸಿ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಈಕ್ವಿಟಿ ಶೇರ್ ನ ವ್ಯವಹರಣೆಗಾಗಿ ಹಣವನ್ನು ಆರೋಪಿಯ ಖಾತೆಗೆ ನೀವು ಹಾಕುತ್ತಿದ್ದೀರಿ ಎಂದರೆ ಅಕೌಂಟ್ ಗೆ ಹಣ ಹಾಕಿದ್ದು ಇದೆ ಆದರೆ ಸ್ಟಾಕ್ ಮಾರುಕಟ್ಟೆಗೆ ಸಂಬಂಧಿಸಿದ್ದು. ಆ ವ್ಯವಹಾರದಲ್ಲಿ ನಿಮಗೆ ನಷ್ಟವಾಗಿದರಿಂದ ಅದನ್ನು ಹೇಗಾದರೂ ಮಾಡಿ ಭರ್ತಿ ಮಾಡಿಕೊಳ್ಳಬೇಕು ಎಂಬ ಕಾರಣದಿಂದ ಆರೋಪಿಯ ಮೇಲೆ ಸುಳ್ಳು ಪಕರಣವನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಮಗಾದ ನಷ್ಟಕ್ಕೆ ಆರೋಪಿಯು ಹೊಣೆಗಾರನಲ್ಲ ಅದು ಸ್ಟಾಕ್ ಮಾರುಕಟ್ಟೆಯ ವೈಪರಿತ್ಯಾ ಕಾರಣ ಎಂದರೆ ಸರಿಯಲ್ಲ. ಆರೋಪಿಯು ಸ್ಟಾಕ್ ಮಾರುಕಟ್ಟೆಯಿಂದ ಜನರೆಟ್ ಆದ ಹಣವನ್ನು ತೆಗೆದುಕೊಳ್ಳಲು ಅನುಕೂಲವಾಗಲಿ ಎಂದು ಕೆಲವೊಂದು ಸಹಿ ಮಾಡಿದ ಚೆಕ್ಕುಗಳನ್ನು ನಿಮ್ಮ ಬಳಿಯಲ್ಲಿ ಇಟ್ಟಿದ್ದು ನೀವು ಅದನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗೆ ನೀವು ಯಾವುದೇ ಹಣವನ್ನು ಸಾಲವಾಗಿ ಕೊಟ್ಟದ್ದು ಇಲ್ಲ ಮತ್ತು ಆತನು ಈ ಪ್ರಕರಣದಲ್ಲಿ ಹಾಕಿದಂತಹ ಚೆಕ್ ಹಣವನ್ನು ಕೊಡಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆತನು ಸಹಿ

ಹಾಕಿದ ಖಾಲಿ ಚೆಕ್ಕುಗಳನ್ನು ಕೊಟ್ಟಿದ್ದನ್ನು ಬಿಟ್ಟರೆ ಅದರಲ್ಲಿರುವ ಬರವಣಿಗೆಯನ್ನು ನೀವೆ ಬರೆದಿರುತ್ತೀರಿ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ಇರುವಂತಹ ಬರವಣಿಗೆಯನ್ನು ಬರೆಯಲು ಆರೋಪಿಯು ನಿಮಗೆ ಯಾವುದೇ ನಿರ್ದೇಶನವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.